ಮಕ್ಕಳ ಮಾತನ್ನು ಆಲಿಸುವುದರ ಪ್ರಾಮುಖ್ಯತೆ

ಸುಕೃತಿ ಲಖ್ತಾಕಿಯ

'ಮೇಡಂ! ಮೇಡಂ! ಮೇಡಂ!' ಎಂದು ಎಲ್ಲರೂ ಒಟ್ಟಾಗಿ ಕಲರವ ಎಬ್ಬಿಸುವ ಧ್ವನಿಯನ್ನು ಆಲಿಸುವುದು ಪ್ರಾಥಮಿಕ ಶಾಲೆಯ ಯಾವುದೇ ಶಿಕ್ಷಕರಿಗೆ ಸಾಮಾನ್ಯ ದಿನಚರಿಯಾಗಿರುತ್ತದೆ. ನನ್ನ ವೈಯಕ್ತಿಕ ಅನುಭವದ ಪ್ರಕಾರ, ತಮ್ಮ ಮಾತನ್ನು ಶಿಕ್ಷಕರು ಕಿವಿಗೊಟ್ಟು ಆಲಿಸುವವರೆಗೂ ಮಕ್ಕಳು ಶಿಕ್ಷಕರ ಹಿಂದೆ ಮುಂದೆ ಸುತ್ತುತ್ತಾ ಗಲಾಟೆ ಎಬ್ಬಿಸುತ್ತಲೇ ಇರುತ್ತಾರೆ. ಅವರು ಹೇಳಬೇಕಾದ ಮಾತು ಅವರು ತೋರಿಸಿಕೊಳ್ಳುವಷ್ಟು ಗಂಭೀರವಾದುದೇನೂ ಆಗಿರುವುದಿಲ್ಲ. 'ಮೇಡಂ, ನಾನು ನೀರು ಕುಡಿಯಬಹುದಾ?', 'ಮೇಡಂ, ನಾನು ಶೌಚಾಲಯಕ್ಕೆ ಹೋಗಬಹುದಾ?' ಎಂದೋ, ಅಥವಾ ಆತುರದಿಂದ, 'ಮೇಡಂ, ನಾನು ಇವತ್ತು ಬುತ್ತಿಗೆ ಅವಲಕ್ಕಿ ತಂದಿದ್ದೇನೆ' ಎಂಬಂತಹ ಸರ್ವೇಸಾಮಾನ್ಯ ಮಾತುಗಳೇ ಆಗಿರುತ್ತವೆ. ಆದರೆ ಅದನ್ನು ಅವರು ಅತ್ಯಂತ ತುರ್ತು ಎಂಬಂತೆಯೋ, ಏನೋ ರಹಸ್ಯವಾದುದನ್ನು ಶಿಕ್ಷಕರೊಂದಿಗೆ ಹಂಚಿಕೊಳ್ಳಲಿದ್ದಾರೆ ಎಂಬಂತೆಯೋ ತೋರ್ಪಡಿಸಿಕೊಳ್ಳುತ್ತಾರೆ!

ಕಿವಿಗೊಡುವುದರ ಮತ್ತು ಆಲಿಸುವುದರ ನಡುವಿನ ಅಂತರ

'ಕಿವಿಗೊಡುವುದು' (hearing) ಮತ್ತು 'ಆಲಿಸುವುದರ' (listening) ನಡುವೆ ಅಂದರೆ, ಗಮನವಿಟ್ಟು ಕೇಳಿಸಿಕೊಳ್ಳುವುದರ ನಡುವೆ ಅಂತರವಿದೆ ಎಂಬುದನ್ನು ಮರೆಯುವುದು ಸುಲಭ. ಕಿವಿಗೊಡುವುದು ಎಂದರೆ, ನಮ್ಮ ಶರೀರದ ಮೂಲಕ ನಡೆಸುವ ಸ್ಪಷ್ಟವಾದ ದೈಹಿಕ ಸ್ಪಂದನೆ; ನಮ್ಮ ಸುತ್ತಮುತ್ತಲಿನ ಶಬ್ದಗಳನ್ನು ದಾಖಲಿಸಲು ಬೇಕಾದಂತೆ ನಮ್ಮ ಕಿವಿಗಳು ವಿನ್ಯಾಸಗೊಂಡಿವೆ. ಮತ್ತೊಂದೆಡೆ, ಗಮನವಿಟ್ಟು ಕೇಳಿಸಿಕೊಳ್ಳುವುದು ಎಂದರೆ, ಗ್ರಹಣಶಕ್ತಿಯ ಸ್ಪಂದನೆಯಾಗಿದೆ (cognitive response). ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕೇಳಿಸಿಕೊಳ್ಳುವುದು ಎಂದರೆ, ಯಾರದೋ ಮಾತಿಗೆ ಕಿವಿಗೊಡುತ್ತಿದ್ದೇವೆ ಎಂದರ್ಥ– ಅವರೇನು ಹೇಳುತ್ತಿದ್ದಾರೋ ಅದಕ್ಕೆ ಮತ್ತು ಅದನ್ನು ಹೇಗೆ ಹೇಳಲಾಗುತ್ತಿದೆ ಎಂಬುದಕ್ಕೆ ಕಿವಿಗೊಡುತ್ತಿದ್ದೇವೆ. ಆ ಮೂಲಕ, ನಾವು ಮಾತನಾಡುವವನಿಗೆ ಪ್ರತಿಕ್ರಿಯಿಸಬಹುದು. ಈ ವಿರೋಧಾಭಾಸವನ್ನು ಗಮನದಲ್ಲಿಟ್ಟುಕೊಂಡಾಗ, ಮಕ್ಕಳನ್ನು ಕೇಳಿಸಿಕೊಳ್ಳುವುದು ಮತ್ತು ಅವರ ಮಾತನ್ನು ಕಿವಿಗೊಟ್ಟು ಆಲಿಸುವುದು ಎರಡೂ ವಿಭಿನ್ನ ಸಂಗತಿಗಳಾಗುತ್ತವೆ.

ಐದು ತಿಂಗಳಿಂದ ನಾನು ಶಾಲೆಯಲ್ಲಿ ಒಂದನೇ ತರಗತಿಗೆ ಶಿಕ್ಷಕಿಯಾಗಿದ್ದು, ನಾನು ಇಲ್ಲಿ ಕಲಿತ ಅತ್ಯಂತ ಮಹತ್ವದ ಸಂಗತಿ ಎಂದರೆ, ಮಕ್ಕಳ ಮಾತುಗಳನ್ನು ಕಿವಿಗೊಟ್ಟು ಕೇಳಿಸಿ–ಕೊಳ್ಳುವುದರ ಮೌಲ್ಯ. ಅನೇಕ ಮಕ್ಕಳು, ವಿಶೇಷವಾಗಿ ಕಡಿಮೆ ಆದಾಯದ ಕುಟುಂಬಗಳಿಂದ ಬಂದ ಸರ್ಕಾರಿ ಶಾಲಾ ಮಕ್ಕಳು, ತಮ್ಮ ಚಿಂತನೆಗಳಿಗೆ, ಯೋಚನೆಗಳಿಗೆ, ಕಲ್ಪನೆಗಳಿಗೆ ಮತ್ತು ತಮ್ಮ ಭಯ, ಬೇಸರಗಳಿಗೆ ಕಿವಿಯಾಗಲು ಆಸಕ್ತಿ ಉಳ್ಳವರನ್ನು ಕಂಡುಕೊಳ್ಳುವಲ್ಲಿ ವಿಫಲರಾಗುತ್ತಾರೆ. ಅವರ ಹೆತ್ತವರು ಹೆಚ್ಚಿನ ಅವಧಿ ಕೆಲಸದಲ್ಲಿ ಕಳೆಯಬಹುದು, ಒಡಹುಟ್ಟಿದವರು (ಇದ್ದರೆ) ಒಂದೋ ಅವರಿಗಿಂತ ತುಂಬಾ ದೊಡ್ಡವರಾಗಿರುತ್ತಾರೆ ಇಲ್ಲವೇ ತೀರಾ ಸಣ್ಣವರಾಗಿರುತ್ತಾರೆ; ಅವರ ಉಳಿದ ಕುಟುಂಬ ಎಲ್ಲೋ ದೂರದಲ್ಲಿ ವಾಸಿಸುತ್ತಿರುತ್ತಾರೆ. ಇದೆಲ್ಲಕ್ಕಿಂತ ಮುಖ್ಯವಾಗಿ, ಶಾಲೆಯಲ್ಲಿ ಸಾಮಾನ್ಯವಾಗಿ ಶಿಕ್ಷಕರು ಮಕ್ಕಳು ಏನು ಹೇಳುತ್ತಾರೆ ಎಂಬುದನ್ನು ತಾಳ್ಮೆಯಿಂದ ಕೇಳಿಸಿಕೊಳ್ಳುವಷ್ಟು ತಾಳ್ಮೆ ಮತ್ತು ಶಕ್ತಿ ಹೊಂದಿರುವುದಿಲ್ಲ. ಯಾಕೆಂದರೆ, ಮಕ್ಕಳ ಮಾತು ಅಪ್ರಸ್ತುತವಾದುದು ಎಂಬುದು ಅವರ ಸಾಮಾನ್ಯ ಅಭಿಪ್ರಾಯ.

ಈ ಎಲ್ಲಾ ಉಪೇಕ್ಷೆಗಳ / ಅನಾದರಗಳ ಮಧ್ಯೆ ಸಿಕ್ಕಿಹಾಕಿಕೊಂಡ ಮಕ್ಕಳು, ತಮ್ಮ ಮಾತಿಗೆ ಕಿವಿಗೊಡಬಲ್ಲವರನ್ನು ಥಟ್ಟನೆ ಗುರುತಿಸಿ, ಅವರಿಗೆ ಅಂಟಿಕೊಳ್ಳುತ್ತಾರೆ. ವಾಸ್ತವವಾಗಿ, ವಯಸ್ಕರೊಂದಿಗೆ ಮಾತನಾಡುವುದಕ್ಕಿಂತ ಮಕ್ಕಳೊಂದಿಗೆ ಮಾತುಕತೆ ಸ್ವಾರಸ್ಯಕರವಾಗಿರುತ್ತದೆ. ಯಾಕೆಂದರೆ, ಮಕ್ಕಳ ಅನಿರೀಕ್ಷಿತ ಪ್ರತಿಕ್ರಿಯೆ, ಅಸಾಂಪ್ರದಾಯಿಕ ರೀತಿಯ ಯೋಚನೆಗಳು ಮತ್ತು ರಚನಾತ್ಮಕವಲ್ಲದ ನಂಬಿಕೆಗಳು ಅಚ್ಚರಿ ಮೂಡಿಸುವಂತಿರುತ್ತವೆ.

ಕೇಳುಗರಾಗಿ ಶಿಕ್ಷಕರು


ಶಾಲೆಯಲ್ಲಿ ಮಾರ್ಗದರ್ಶಕರಾಗಿ (ಶಿಕ್ಷಕರಾಗಿ), ಮಕ್ಕಳ ಮೌಖಿಕ ಅಭಿವ್ಯಕ್ತಿಗಳಿಗೆ ಸಮರ್ಪಕ ಅವಕಾಶ ಕಲ್ಪಿಸುವುದು ಬಹಳ ಮುಖ್ಯ. ಎನ್‌ಸಿಇಆರ್‌ಟಿ ಕೊಟ್ಟಿರುವಂತೆ ಪ್ರಾಥಮಿಕ ತರಗತಿಗಳಿಗೆ ಪುನರಾವರ್ತಿತ ಕಲಿಕೆಯ ಫಲಿತಾಂಶವು, 'ಒಂದು ಘಟನೆಯನ್ನು ವಿಸ್ತೃತವಾಗಿ ವಿವರಿಸಬಲ್ಲ ಸಾಮರ್ಥ್ಯ ಬೆಳೆಸುವುದು, ಕೊಟ್ಟಿರುವಂತಹ ಒಂದು ಕಾಲ್ಪನಿಕ ಸನ್ನಿವೇಶಕ್ಕೆ ಹೇಗೆ ಸ್ಪಂದಿಸುವುದು ಮತ್ತು ಅವರ ದೈನಂದಿನ ಅನುಭವಗಳನ್ನು ಹಂಚಿಕೊಳ್ಳುವ ಸಾಮರ್ಥ್ಯ ಬೆಳೆಸುವುದು' ಆಗಿರುತ್ತದೆ. ಇಂತಹ ಕಲಿಕೆಯ ಪರಿಣಾಮ / ಫಲಿತಾಂಶಗಳಿಗೆ ಸಣ್ಣ ವಯಸ್ಸಿನಿಂದಲೇ ಮಕ್ಕಳ ಸಮಾಜೋ– ಭಾವನಾತ್ಮಕ ಬೆಳವಣಿಗೆಯೊಂದಿಗೆ ನಂಟು ಇರುತ್ತದೆ. ಇವೆಲ್ಲವುಗಳಿಗಾಗಿ, ಹಂಚಿಕೊಂಡ ಮಾಹಿತಿಗಳನ್ನೆಲ್ಲಾ ಅರ್ಥ ಮಾಡಿಕೊಂಡು, ಅದನ್ನು ಪರಿಷ್ಕರಿಸಬಲ್ಲ / ಪ್ರಕ್ರಿಯೆ ಮಾಡಿ, ಇನ್ನಷ್ಟು ಚಿಂತನೆಯನ್ನು ರಚನಾತ್ಮಕವಾಗಿ ಪ್ರೇರೇಪಿಸಬಲ್ಲ ಒಬ್ಬ ಕ್ರಿಯಾಶೀಲ ಕೇಳುಗರ

ಅವಶ್ಯಕತೆ ಇರುತ್ತದೆ. ಶಾಲೆಯಲ್ಲಿರುವ ಶಿಕ್ಷಕರೇ ಇದಕ್ಕೆ ಸೂಕ್ತ ವ್ಯಕ್ತಿ. ಶಿಕ್ಷಕಿಯು ಮಕ್ಕಳ ಮಾತಿಗೆ ಕಿವಿಗೊಟ್ಟು ಆಲಿಸುವ ಜೊತೆಗೆ, ಮಾತಿನ ನಡುವೆ ವಿವರ ಕೇಳಿ ತಿಳಿದುಕೊಂಡು ಮಕ್ಕಳು ಹೇಳುವುದನ್ನು ಅರ್ಥ ಮಾಡಿಕೊಳ್ಳಲೂ ಇದು ಸಹಕಾರಿ.

ತಾಜಾ ಅನುಭವಗಳು

ಒಂದು ದಿನ ನಾನು ಶಾಲೆಗೆ ಹೋಗಿ, ತರಗತಿಯೊಳಗೆ ಪ್ರವೇಶಿಸುವಷ್ಟರಲ್ಲಿ ರೂಬಿ (ಎಂಟು ವರ್ಷದ ಬಾಲಕಿ), ತನಗೆ ಹಿಂದಿನ ರಾತ್ರಿ ಚೇಳು ಕಚ್ಚಿತ್ತು ಎಂದು ಹೇಳಲು ಓಡೋಡಿ ಬಂದಳು. ನನಗೆ ಆಶ್ಚರ್ಯವಾಗಿ, ಹೇಗಾಯ್ತು, ನೀನು ಆರಾಮವಾಗಿ ಇದ್ದೀಯಾ ತಾನೆ, ನಿನ್ನ ಹೆತ್ತವರು ಏನು ಮಾಡಿದರು ಮುಂತಾದವುಗಳನ್ನು ವಿವರಿಸುವಂತೆ ಹೇಳಿದೆ. ಅವಳು, 'ಅಮ್ಮ ಮತ್ತು ಅಪ್ಪ ಏನೂ ಹೇಳಲಿಲ್ಲ. ನಾನೇ ಬೋರೊಪ್ಲಸ್ಹಚ್ಚಿದೆ' ಎಂದು ಹಿಂದಿಯಲ್ಲಿ ಹೇಳಿದಳು. ಅವಳ ಉತ್ತರ ತಮಾಷೆಯಾಗಿ ಕಂಡಿದ್ದಲ್ಲದೆ, ಸಮಾಧಾನವೂ ಆಯಿತು. ಯಾಕೆಂದರೆ ಅವಳಿಗೆ ಕಚ್ಚಿದ್ದು ಚೇಳು ಆಗಿರಲು ಸಾಧ್ಯವೇ ಇರಲಿಲ್ಲ. ಗಣೇಶ್(ಏಳು ವರ್ಷ), ಒಂದು ದಿನ ಎಂದಿನಂತೆ ಇಲ್ಲದೆ ಮೌನವಾಗಿದ್ದ. ಯಾಕೆ ಎಂದು ವಿಚಾರಿಸಿದಾಗ, 'ತಂದೆಯ ಸೈಕಲ್ಕಳುವಾಗಿದೆ. ನಾವು ಮಂಗೋಡಿ (Mangodi) ತಿನ್ನುತ್ತಿದ್ದಾಗ ಕಳ್ಳ ಬಂದು ಸೈಕಲ್ಎತ್ತಿಕೊಂಡು ಹೋಗಿಬಿಟ್ಟ' ಎಂದನು. ಆ ನಂತರದ ದಿನಗಳಲ್ಲಿ ನಾನು ಅವನನ್ನು ಪ್ರತಿ ದಿನವೂ 'ಸೈಕಲ್ಸಿಕ್ಕಿತೇ' ಎಂದು ವಿಚಾರಿಸುತ್ತಿದ್ದೆ. ಇಲ್ಲ ಎಂದು ಉತ್ತರಿಸುತ್ತಿದ್ದ. ಆದರೆ, ನಾನು ತರಗತಿ ಪ್ರವೇಶಿಸುವಾಗ ಮತ್ತು ತರಗತಿ ಮುಗಿಸಿ ಹೊರಡುವಾಗ ದಿನಾಲೂ ಅವನು ನನಗೆ ನಮಸ್ಕರಿಸಲು ಶುರು ಮಾಡಿದ. ಪ್ರೀತಿಯಿಂದ ಡುಗ್ಗು ಎಂದು ಕರೆಸಿಕೊಳ್ಳುತ್ತಿದ್ದ ಐದು ವರ್ಷದ ಹರಿ ಓಂ, ಪ್ರತಿದಿನವೂ ಕಣ್ಣಲ್ಲಿ ನೀರು ತುಂಬಿಕೊಂಡೇ ಶಾಲೆಗೆ ಬರುತ್ತಿದ್ದ. ಬಂದವನೇ, 'ಮೇಡಂ, ನಾವು ಮನೆಗೆ ಹೋಗುವುದು ಯಾವಾಗ? ನನ್ನ ಸಹೋದರ ಎಷ್ಟು ಹೊತ್ತಿಗೆ ಬರುತ್ತಾನೆ?' ಎಂದು ಕೇಳುತ್ತಿದ್ದ. ಶಾಲೆಯಲ್ಲಿ ಮರುಗಿಕೊಂಡೇ ಇರುತ್ತಿದ್ದ ಅವನಿಗೆ ಶಾಲೆಗೆ ಬರುವುದು ಇಷ್ಟವೇ ಇಲ್ಲದಿರುವುದು ಅಚ್ಚರಿಯ ಸಂಗತಿಯಾಗಿರಲಿಲ್ಲ. ಇದರಿಂದಾಗಿ ಅವನ ಯೋಚನಾ ಶಕ್ತಿ ಮತ್ತು ಕಲಿಕಾ ಸಾಮರ್ಥ್ಯಕ್ಕೂ ಧಕ್ಕೆಯಾಗುತ್ತಿರುವುದನ್ನು ನಾನು ಅರಿತೆ. ಹರಿ ಓಂ ಒಬ್ಬ ಅನಾಥ ಬಾಲಕ ಎಂದು ಕೆಲವೇ ದಿನಗಳಲ್ಲಿ ನನಗೆ ಗೊತ್ತಾಯಿತು. ಕೆಲವು ವಾರ ಗಮನಿಸಿದ ಬಳಿಕ, ಅವನಿಗೆ ಕಲಿಕಾ ನ್ಯೂನತೆ (learning disability) ಇರುವ ಸಂದೇಹ ಉಂಟಾಯಿತು. ಆದರೆ, ಅವನೊಂದಿಗೆ ಸೌಹಾರ್ದ ಸಂಬಂಧ ಬೆಳೆಸಿಕೊಳ್ಳಬೇಕಾದರೆ, ಅವನ ಮಾತಿಗೆ ಕಿವಿಗೊಡಬೇಕು, ಆತ್ಮೀಯವಾಗಿ ಮಾತನಾಡಬೇಕು ಮತ್ತು ನಿರ್ಭೀತ ವಾತಾವರಣವನ್ನು ನಿರ್ಮಿಸಿ, ಅವನು ತನ್ನ ಭಾವನೆಗಳನ್ನು ಹಂಚಿಕೊಳ್ಳುವಂತೆ ಮಾಡಬೇಕಾಗಿತ್ತು. ಅವನು ನನಗೆ ಕುಳ್ಳಿ ಟೀಚರ್('ಚೋಟಿ ಮೇಡಂ') ಎಂದು ಹೆಸರಿಟ್ಟಿದ್ದ. ಕ್ರಮೇಣ ಅವನ ಕಣ್ಣೀರು ನಿಂತುಹೋಗಿದ್ದಲ್ಲದೆ, ಆಗಾಗ ಅವನ ಮುಖದಲ್ಲಿ ನಗು ಮೂಡಲಾರಂಭಿಸಿತು ಹಾಗೂ ಕಲಿಯುವ ಆಸಕ್ತಿಯನ್ನು ತೋರಲಾರಂಭಿಸಿದ. ಕೆಳಗಿನ ಚಿತ್ರದಲ್ಲಿ, ನಾನು ಅವನ ಚಿತ್ರ ಬಿಡಿಸಿ ಅವನ ಹೆಸರು ಬರೆದೆ. ಪ್ರತಿಯಾಗಿ ಅವನು ನನ್ನ ಚಿತ್ರ ಬರೆದ. (ಚಿತ್ರ 2). 'ಇದು ನಾನು ತಾನೇ? ಹಾಗಿದ್ದರೆ ನನ್ನ ಕೂದಲು ಎಲ್ಲಿ? ನನ್ನ ಕೈ-ಕಾಲು ಎಲ್ಲಿ?" ಎಂದು ನಾನು ಕೇಳಿದಾಗ, ತಾನು ಬಿಡಿಸಿದ ಚಿತ್ರದಲ್ಲಿ ಅವೆಲ್ಲ ವಿವರಗಳನ್ನೂ ತಕ್ಷಣವೇ ಸೇರಿಸಿದ.

ಮಕ್ಕಳು ತಮಗೆ ಅನಿಸಿದ್ದನ್ನು ಪ್ರಾಮಾಣಿಕವಾಗಿ ನನ್ನೊಂದಿಗೆ ಮುಕ್ತವಾಗಿ ಹೇಳಿಕೊಳ್ಳುತ್ತಾರೆ. ಕೆಲವೊಮ್ಮೆ ತರಗತಿಯಲ್ಲಿನ ಚಟುವಟಿಕೆಗಳು ಅವರಿಗೆ ಇಷ್ಟವಾಗದೇ ಇದ್ದರೆ ಅವರು, 'ಟೀಚರ್, ನಮಗೆ ಇದು ಖುಷಿ ಕೊಡುತ್ತಿಲ್ಲ!' ಎಂದು ಮುಕ್ತವಾಗಿ ಹೇಳಿಕೊಂಡಿದ್ದಿದೆ. ಒಮ್ಮೆ ನನಗೆ ಪೆಚ್ಚೆನಿಸಿದರೂ, ಅವರ ಮುಕ್ತ ಭಾವನೆಯನ್ನಷ್ಟೇ ಪರಿಗಣಿಸುತ್ತೇನೆ. ಯಾಕೆಂದರೆ ಅದು ಅವರು ನನ್ನ ತರಗತಿಯಲ್ಲಿ ಆರಾಮವಾಗಿ ಇದ್ದಾರೆ ಎಂಬುದರ ಸಂಕೇತ.



ಚಿತ್ರ 1. ಹರಿ ಓಂನ ಸ್ಲೇಟಿನಲ್ಲಿ ನಾನು ಬಿಡಿಸಿದ ಅವನ ಚಿತ್ರ.



ಚಿತ್ರ 2. ಹರಿ ಓಂ ಬಿಡಿಸಿದ ನನ್ನ ಅಂದರೆ 'ಕುಳ್ಳಿ ಟೀಚರ್'ನ ಚಿತ್ರ

ಚಿಟ್ಟೆಯ ಸಾಧನದೊಂದಿಗೆ ಕತೆ ಹೇಳಿದ ಮಕ್ಕಳು

ಚಿಟ್ಟೆಯ ಸಾಧನದೊಂದಿಗೆ ನಡೆಸಿದ ಸಂಭಾಷಣೆಯು, ನನ್ನ ತರಗತಿಯಲ್ಲಿ ನಾವು ಕೈಗೊಂಡ ಅತ್ಯುತ್ತಮ ಸಂಭಾಷಣೆಯಾಗಿ ಹೊರಹೊಮ್ಮಿತು. ಗಣಿತದ ಆರಂಭಿಕ ಹಂತದಲ್ಲಿ, ಎಣಿಕೆ ಮತ್ತು ಅಂಕಿಗಳ ಕುರಿತಾದ ಗುಣಾತ್ಮಕ ಅರಿವನ್ನು ಬೆಳೆಸಿ, 'ಗಣಿತಮಾಲಾ'ವನ್ನು ಬಳಸಲು ಪ್ರೋತ್ಸಾಹಿಸಲಾಗಿತ್ತು. ಬೇರೆಬೇರೆ ಬಣ್ಣಗಳ ಮಣಿಗಳನ್ನು ಕ್ರಮಬದ್ಧವಾಗಿ ಹತ್ತರ ಜೋಡಿಯಲ್ಲಿ ಪೋಣಿಸಲಾದ ಮಣಿಗಳ ಮಾಲೆ ಗಣಿತ್‌ಮಾಲಾ. ಪ್ರಾಥಮಿಕ ತರಗತಿಯ ಮಕ್ಕಳಿಗೆ, ಚಲನೆಯನ್ನು ಅರ್ಥವತ್ತಾಗಿ ಹೇಳಿಕೊಡುವ ವಿಧಾನ ಇದಾಗಿದೆ. 'ಗಣಿತಮಾಲಾ'ವು ಒಂದು ಕೈತೋಟವಾಗಿದ್ದು, ಅದರಲ್ಲಿನ ಮಣಿಗಳು ಹೂವುಗಳೆಂದೂ ಕಲ್ಪಿಸಿಕೊಂಡು, ಒಂದು ಸಣ್ಣ ಕಾಗದದ ತುಂಡನ್ನು ಹೂವಿನಿಂದ ಹೂವಿಗೆ ಹಾರುವ ಚಿಟ್ಟೆ ಎಂದೂ ಕಲ್ಪಿಸಿಕೊಳ್ಳುವ, ಗಣಿತದ ಮನರಂಜನಾತ್ಮಕ ಆಟವಿದು. ತರಗತಿಗಾಗಿ ನಾನು ಹಲವಾರು ಚಿಟ್ಟೆಗಳನ್ನು ಮಾಡುತ್ತಲೇ ಇದ್ದೆ. ಯಾಕೆಂದರೆ, ಹಿಂದೆ ಮಾಡಿದ್ದ ಚಿಟ್ಟೆಗಳು ಕಳೆದುಹೋಗಿಯೋ, ಹರಿದೋ, ಸಣ್ಣ ಮಕ್ಕಳು ತೆಗೆದುಕೊಂಡೋ ಕೈತಪ್ಪಿಹೋಗಿದ್ದವು. ಒಂದು ದಿನ ನಾನು ತರಗತಿಗೆ ಹೋಗಿ ನೋಡುವಾಗ, ಮತ್ತೆ ಒಂದು ಚಿಟ್ಟೆ ಕಳೆದುಹೋಗಿದ್ದು ಗಮನಕ್ಕೆ ಬಂತು. ಆಗ ನಾನು ಉತ್ಪ್ರೇಕ್ಷಿತ ದನಿಯಲ್ಲಿ, 'ಓಹೋ ನಮ್ಮ ಚಿಟ್ಟೆ ಬಹಳ ದಿನಗಳಿಂದ ಕಾಣಿಸುತ್ತಿಲ್ಲ. ಎಲ್ಲಿ ಹಾರಿಹೋದಳು ಅವಳು? ಅವಳೆಲ್ಲಿಯಾದರೂ ಬಿದ್ದು ಏಟು ಮಾಡಿಕೊಂಡಿದ್ದರೆ?' ಎಂದು ಹೇಳಿದೆ. ಆಗ ಮಕ್ಕಳಿಂದ ಬಂದ ಪ್ರತಿಕ್ರಿಯೆ ಹೀಗಿತ್ತು:

ವೈಶಾಲಿ: ಟೀಚರ್, ನಮ್ಮ ಚಿಟ್ಟೆ ಅವಳ ಹಳ್ಳಿಗೆ ಹೋಗಿರಬಹುದು.
ಅನುಜ್: ಹೌದು! ಹಾಗಾಗಿ ವಾಪಸ್‌ಬರಲು ಅವಳು ಇಷ್ಟೊಂದು ಸಮಯ ತೆಗೆದುಕೊಳ್ಳುತ್ತಿದ್ದಾಳೆ

ರೂಬಿ: ಅವಳು ಮನೆ ಕಟ್ಟಿಕೊಳ್ಳುವುದರಲ್ಲಿ ತೊಡಗಿಸಿಕೊಂಡಿರಬಹುದು.

ನಾನು: ಓಹೋ ಹಾಗೋ? ಈ ಮಾತು ಸರಿಯಾಗಿದೆ. ಮನೆ ಕಟ್ಟುವುದೆಂದರೆ ಸಾಕಷ್ಟು ಸಮಯ ಬೇಕಾಗುತ್ತದೆ. ಅವಳು ಇಟ್ಟಿಗೆಯಿಂದ ಮನೆ ಕಟ್ಟುತ್ತಿದ್ದಾಳಾ?

ರಿಷಿ: ಇಲ್ಲ ಟೀಚರ್. ಚಿಟ್ಟೆಗಳು ಹೂವಿನಲ್ಲಿ ವಾಸಿಸುತ್ತವೆ. ಅವಳು ಹೂವುಗಳಿಂದಲೇ ಮನೆ ಕಟ್ಟುತ್ತಿದ್ದಾಳೆ.

ಈ ಇಡೀ ಮಾತುಕತೆ ನನಗೆ ಬಹಳ ಆಸಕ್ತಿಕರವಾಗಿ ಕಂಡಿತು. ಮಕ್ಕಳೆಲ್ಲರೂ ತಮ್ಮ ಪಾಡಿಗೆ ತಮ್ಮತಮ್ಮ ಕಲ್ಪನೆಗಳಿಗೆ ಎಟುಕಿದಂತೆ ಕತೆಗಳನ್ನು ಕಲ್ಪಿಸಿಕೊಂಡು ಹೇಳಿಕೊಳ್ಳ–ತೊಡಗಿದರು! ಕೆಲವೊಮ್ಮೆ, ನಾನು ಸಹಜವಾಗಿ ಎಂಬಂತೆ, ಚಿಟ್ಟೆ ಕಳೆದುಹೋದುದರ ಬಗ್ಗೆ ನಿರಾಶೆ ವ್ಯಕ್ತಪಡಿಸುತ್ತೇನೆ. ಆಗ ಮಕ್ಕಳು ಯಾರಾದರೂ ತಕ್ಷಣವೇ ಕಾಗದದ ಚಿಟ್ಟೆ ಮಾಡಿ ನನಗೆ ತಂದುಕೊಟ್ಟು, 'ನೋಡಿ ಟೀಚರ್, ನಮ್ಮ ಚಿಟ್ಟೆಯ ತಂಗಿ ಬಂದಿದ್ದಾಳೆ' ಎಂದು ಹೇಳ ಕೊಡುತ್ತಿದ್ದರು. ಗಣಿತಮಾಲ–ದೊಂದಿಗೆ ಆಟವಾಡುವಾಗಲೆಲ್ಲಾ ನಾನು ಅವರನ್ನು ಎಚ್ಚರಿಸುತ್ತಲೇ ಇರುತ್ತೇನೆ. ಉದಾಹರಣೆಗೆ, ಯಾವುದಾದರೂ ವಿದ್ಯಾರ್ಥಿ ಕಾಗದದ ಚಿಟ್ಟೆಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರೆ, ನಾನು, 'ಅಯ್ಯೋ ನಮ್ಮ ಚಿಟ್ಟೆ ತುಂಬಾ ಸೂಕ್ಷ್ಮ. ಅವಳನ್ನು ಜೋಪಾನವಾಗಿ ಹಿಡಿದುಕೊಳ್ಳಬೇಕು' ಎಂದು ಹೇಳುತ್ತೇನೆ. ಒಂದು ದಿನ ಅನುಜ್‌ಹೇಳಿದ: 'ಟೀಚರ್, ನಮ್ಮ ಚಿಟ್ಟೆಗೆ ಜ್ವರ ಬಂದಿದೆ. ಅವಳ ಮೈ ಸುಡುತ್ತಿದೆ!' ಎಂದು.

ಹರಿ ಓಂಗೆ ಈ ಆಟದ ಮುಂದುವರಿಕೆ ಬಹಳ ಚೆನ್ನಾಗಿ ಹೊಂದಿಕೆಯಾಯಿತು. ಅವನು ಇನ್ನೂ ಅಂಕಿಗೂ ಹಿಂದಿನ ಪರಿಕಲ್ಪನೆಯ ಹಂತದಲ್ಲಿದ್ದುದರಿಂದ, ಅಡ್ಡಾದಿಡ್ಡಿಯಾಗಿ ಎಣಿಸುವ ವೇಳೆ ಅವನು ಎರಡೆರಡು ಸಾಲಿನ ಮಣಿಗಳನ್ನು ತಳ್ಳುತ್ತಿದ್ದ. ಹಾಗಾಗಿ, 'ಹರಿ ಓಂ, ಈ ಚಿಟ್ಟೆ ತುಂಬಾ ಸಣ್ಣದು. ಅದು ಹಲವು ಹೂವುಗಳನ್ನು ಒಂದೇ ಬಾರಿಗೆ ತಿನ್ನಲಾರಳು. ಒಂದು ಸಲಕ್ಕೆ ಒಂದೇ ಮಣಿಯನ್ನು ತಳ್ಳು. ಇಲ್ಲದಿದ್ದರೆ ಅದು ಅವಳ ಗಂಟಲಲ್ಲಿ ಸಿಕ್ಕಿಹಾಕಿಕೊಂಡೀತು!' ಎಂದು ಅವನಿಗೆ ಹೇಳಿದೆ. ನನ್ನನ್ನು ನೇರವಾಗಿ ದಿಟ್ಟಿಸಿ, ನನ್ನ ಮಾತನ್ನು ಅರ್ಥೈಸಿಕೊಂಡ ಹರಿ ಓಂ, ನಂತರ ಒಂದೊಂದೇ ಮಣಿಗಳನ್ನು ತಳ್ಳಲಾರಂಭಿಸಿದ. ಆದರೆ ಕೆಲವೇ ಹೊತ್ತಿನಲ್ಲಿ ಮತ್ತೆ ಹಿಂದಿನಂತೆ ಒಂದೇ ಬಾರಿಗೆ ಅನೇಕ ಮಣಿಗಳನ್ನು ತಳ್ಳುತ್ತಾ, 'ಟೀಚರ್, ಚಿಟ್ಟೆಗೆ ಬಹಳ ಹಸಿವಾಗಿದೆ! . ಅವಳು ಇದನ್ನೆಲ್ಲಾ ತಿನ್ನುತ್ತಾಳೆ ಎಂದು ಆತುರದಿಂದ ಹೇಳಿದ.



ಚಿತ್ರ 3. ಗಣಿತಮಾಲ ಮತ್ತು ಚಿಟ್ಟೆಯ ಸಾಧನದೊಂದಿಗೆ ಮಕ್ಕಳು ಆಟವಾಡುತ್ತಿರುವುದು.

ವಿಮರ್ಶಾತ್ಮಕ ಆಲೋಚನೆಯ ಕಡೆಗೆ ಒಂದು ಹೆಜ್ಜೆ

ಮಕ್ಕಳ ಮಾತಿಗೆ ಕಿವಿಗೊಡುವುದೆಂದರೆ, ಮಾತುಕತೆಯನ್ನು ಸಮೃದ್ಧಗೊಳಿಸುವ ಮೂಲಕ ಎರಡೂ ದಿಕ್ಕಿನಲ್ಲಿ ಕಲಿಕೆಗೂ ಅವಕಾಶ ನೀಡುತ್ತದೆ. ನನ್ನ ಕೆಲವು ಅನುಭವಗಳ ಪ್ರಕಾರ, ಮಕ್ಕಳಿಗೆ ನಾವು ಅಂದುಕೊಂಡದ್ದಕ್ಕಿಂತ ಹೆಚ್ಚು ತಿಳುವಳಿಕೆ ಇರುತ್ತದೆ. ಒಂದು ದಿನ ತರಗತಿಯಲ್ಲಿ, ಹಿಂದಿಯ 'ರ' ಅಕ್ಷರಕ್ಕೆ ಸಂಬಂಧಿಸಿದ ಪದಗುಚ್ಛವನ್ನು ನಾವು ರಚಿಸುತ್ತಿದ್ದೆವು. 'ರ' ಅಕ್ಷರದಿಂದ 'ರೂಪಾಯಿ' (ರ ಸೇ ರೂಪಯೇ) ಎಂದು ನಾನು ಹಿಂದಿಯಲ್ಲಿ ಬರೆದಿದ್ದೆ. ಬರೆದು ಮುಗಿದ ಮೇಲೆ ನಾನು ಅಲ್ತಾಮಶ್ನನ್ನು (ಏಳು ವರ್ಷ) ಕರೆದು ಮುಂದೆ ಬರುವಂತೆ ಹೇಳಿ, 'ರ' ಅಕ್ಷರದೊಂದಿಗೆ ನೀನು ಏನಾದರೂ ಗುರುತಿಸಬಲ್ಲೆಯಾ?" ಎಂದು ಕೇಳಿದೆ. ಅವನು, 'ರ ಸೇ ರೂಪಯೇ' ಎಂದು ಓದಿದಾಗ ಕೆಳಗಿನ ಮಾತುಕತೆ ಸೃಷ್ಟಿಯಾಯಿತು. ಅಭಯ್(ಆರು ವರ್ಷ) ಅವನ ಪಕ್ಕದಲ್ಲಿಯೇ ನಿಂತು ಕೇಳಿಸಿಕೊಳ್ಳುತ್ತಿದ್ದ.

ಅಲ್ತಾಮಶ್ : ಟೀಚರ್, ಡಾಲರ್ ಕೂಡಾ ಆಗುತ್ತದೆ

ನಾನು : ಡಾಲರ್ಅಂದರೆ ಏನು?


ಅಲ್ತಾಮಶ್ : ಒಂದು ಡಾಲರ್ಅಂದರೆ ಒಂದು ಸಾವಿರ ರೂಪಾಯಿಗೆ ಸಮ ಎಂದು ನನ್ನ ತಂದೆ ಹೇಳುತ್ತಿದ್ದರು.

ನಾನು : ಈ ಡಾಲರ್ಎಲ್ಲಿ ಬಳಕೆಯಾಗುತ್ತದೆ?

ಅಲ್ತಾಮಶ್ : ದಿಲ್ಲಿ ಮತ್ತು ಮುಂಬೈನಲ್ಲಿ.

ನಾನು : ಡಾಲರ್ಅಮ್ರಿಕದಲ್ಲಿ ಚಲಾವಣೆಯಾಗುತ್ತದೆ ಎಂದು ನನಗೆ ಅನಿಸುತ್ತದೆ. ಅಂದ ಹಾಗೆ ನೀನು ಅಮ್ರಿಕ ಎಂಬ ಹೆಸರು ಈ ಮೊದಲು ಕೇಳಿದ್ದೀಯಾ? ಅಮ್ರಿಕಾ ಎಲ್ಲಿದೆ?

ಅಭಯ್ : ಟೀಚರ್, ಅದು ಅಮ್ರಿಕಾ ಅಲ್ಲ ಅಮೆರಿಕಾ!



ಚಿತ್ರ 1. ಹಿಂದಿಯರ ಅಕ್ಷರದಿಂದ ರಚಿಸಿರುವ ಪದಗುಚ್ಛಗಳನ್ನು ಬರೆದ ಕಪ್ಪುಹಲಗೆಯ ಮುಂದೆ ಅಲ್ತಾಮಶ್; ಮೇಲಿನ ಎಡತುದಿಯಲ್ಲಿ ರೂಪಾಯಿ ಎಂದು ಬರೆಯಲಾಗಿದೆ

ಶಾಲೆಯಲ್ಲಿ ಶಿಕ್ಷಕಿ ಮಕ್ಕಳ ಮಾತನ್ನು ಸಕ್ರಿಯವಾಗಿ ಕಿವಿಗೊಟ್ಟು ಆಲಿಸುವುದರಿಂದ ಮಕ್ಕಳ ಚಿಂತನಾ ಕ್ರಮವನ್ನು ಉತ್ತೇಜಿಸಿದಂತಾಗುತ್ತದೆ. ಬಹುಶಃ ಇದು ಶಾಲಾ ಶಿಕ್ಷಣದಲ್ಲಿ ಪಠ್ಯಪುಸ್ತಕಗಳಂತಹ ಸಾಂಪ್ರದಾಯಿಕ ಸಾಧನಗಳಿಂದ ಸಾಧ್ಯವಾಗದ ಪ್ರಕ್ರಿಯೆ. ದೈನಂದಿನ ಪ್ರಸಂಗಗಳ ಕುರಿತು ಮಕ್ಕಳನ್ನು ಸಂವಾದದ ಮೂಲಕ ಗಂಭೀರ ಯೋಚನೆಗೆ ಸೆಳೆಯುವುದು, ಗಣಿತದ ಅಮೂರ್ತ ಪ್ರಶ್ನೆಗಳ ಮೂಲಕ ಸೆಳೆಯುವುದಕ್ಕಿಂತ ಸುಲಭ. ಈ ಎಲ್ಲವುಗಳಿಂದ, ಮಕ್ಕಳಿಗೆ ಕಿವಿಗೊಟ್ಟು ಆಲಿಸುವುದರಿಂದ, ನಾವು ಅವರ ಬಗ್ಗೆ ಕಾಳಜಿ ವಹಿಸುತ್ತೇವೆ ಎಂದೂ, ನೀವು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಹಾಜರಿದ್ದೀರಿ ಎಂದೂ ಮತ್ತು ನೀವು ನಿಮ್ಮ ಸಮಯ ಮತ್ತು ಶಕ್ತಿಯನ್ನು ವಿನಿಯೋಗಿಸುವ ಮೂಲಕ ಅವರನ್ನು ಗೌರವಿಸುತ್ತೀರಿ ಎಂದೂ ತೋರಿಸಿದಂತಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ, ಒಬ್ಬ ವಯಸ್ಕರು ಇನ್ನೊಬ್ಬ ವಯಸ್ಕರ ಮಾತನ್ನು ಗಮನವಿಟ್ಟು ಆಲಿಸುವುದೆಂದರೆ ಅವರನ್ನು ಗೌರವಿಸಿದಂತೆ. ಮಕ್ಕಳು ಕೂಡಾ ಇತರರಂತೆ ಗೌರವಿಸಲು ಅರ್ಹರಿರುತ್ತಾರೆ. ಅಲ್ಲದೆ, ಮಕ್ಕಳ ಸುರಕ್ಷೆ ಮತ್ತು ನಮ್ಮವರು ಎಂಬ ಭಾವವೂ ಸೇರಿಕೊಂಡು, ಮಕ್ಕಳಲ್ಲಿ ಶಾಲಾ ವ್ಯವಸ್ಥೆಯು ತಮ್ಮ ಜೀವನದ ಕೌಶಲಗಳನ್ನು ಕಲಿಯುವ/ಕಲಿಸುವ ಸ್ಥಳ ಎಂಬ ಬೆಚ್ಚನೆಯ ಭಾವವನ್ನು ಕಟ್ಟಿಕೊಡುತ್ತದೆ.

(ಮಕ್ಕಳ ಹಿತದೃಷ್ಟಿಯಿಂದ ಅವರ ಹೆಸರುಗಳನ್ನು ಬದಲಿಸಲಾಗಿದೆ).



ಸುಕೃತಿ ಲಖ್ತಾಕಿಯಾ ಅವರು ಮಧ್ಯಪ್ರದೇಶದ ಸಾಗರ್‌ನಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಅಸೋಸಿಯೇಟ್ ಆಗಿದ್ದಾರೆ. ಅವರು ದೆಹಲಿ-ಎನ್‌ಸಿಆರ್‌ನ ಶಿವ್ ನಾಡಾರ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಓದುವುದು, ಸಿನಿಮಾ ವೀಕ್ಷಣೆ, ಬರವಣಿಗೆ ಮತ್ತು ಪಕ್ಷಿ ವೀಕ್ಷಣೆ ಅವರಿಗೆ ಇಷ್ಟ. ಅವರನ್ನು sukriti.lakhtakia@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ರೋಹಿಣಿ ಮುಂಡಾಜೆ** | ಪರಿಶೀಲನೆ: **ಲತಾ ಕೆ.ಸಿ.**

ಉಲ್ಲಾಸದ ವಾತಾವರಣ ನಿರ್ಮಿಸಲು, ಶಿಕ್ಷಕರು ಮಕ್ಕಳೊಂದಿಗೆ ನೃತ್ಯ, ನಾಟಕದಂತಹ ಮೋಜಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ನಾವು ವಿದ್ಯಾರ್ಥಿಗಳನ್ನು ಅಪ್ಪಿಕೊಳ್ಳುವ, ಕೈಜೋಡಿಸುವ (ಹೈ-ಫೈವ್) ಮತ್ತು ನೀಡಲಾಗಿರುವ ಇತರ ಸನ್ನೆಗಳ ಮೂಲಕ ಬರಮಾಡಿಕೊಳ್ಳುತ್ತೇವೆ. ಅವರ ದಿನ ಹೇಗಿದೆ, ಅವರಿಗೆ ಏನು ಅನಿಸುತ್ತಿದೆ, ಅವರ ಮನಸ್ಥಿತಿ ಬದಲಾಗಿದ್ದರೆ ಅದಕ್ಕೆ ಕಾರಣ ಏನು ಇತ್ಯಾದಿಯನ್ನು ಅರ್ಥೈಸಿಕೊಳ್ಳಲು ಯತ್ನಿಸುತ್ತೇವೆ. ಮಕ್ಕಳು ತಮ್ಮನ್ನು ತಾವು ಅರ್ಥ ಮಾಡಿಕೊಳ್ಳಲು ಇದು ಸಹಕಾರಿ.

ಫರ್ಝಾನಾ ಬೇಗಂ, ಸಮಾಜಿಕ-ಭಾವನಾತ್ಮಕ ಕಲಿಕೆ, ಪುಟ ೩೩